<u>ಸಾಕ್ಷಿಯನ್ನು ದಿಃ**14.03.2024** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಬಿ ಎಲ್ ಎಸ್ ವಕೀಲರಿಂದಃ</u>**

ದಾವೆಯ 2 ನೇ ಐಟಂ ಆಸ್ತಿ ಯ ಚೆಕ್ಕು ಬಂದಿ ಹೇಳಲು ಆಗುವುದಿಲ್ಲ. ಸದರಿ ಜಮೀನು ಈ ದಾವೆ ಹಾಕುವ ಮುಂಚೆ ನೋಡಿದ್ದೇನೆ. ದಾವೆಯ 3 ನೇ ಐಟಂ ಆಸ್ತಿ ಸರ್ವೆ ನಂ.16/3 ಒಟ್ಟು 6 ಎಕರೆ 14 ಗುಂಟೆ ಇದೆ ಎಂದರೆ ನಿಜ. ಆ ಪೈಕಿ 2 ನೇ ಪ್ರತಿವಾದಿ ಕೆಂಚಮ್ಮನಿಗೆ 3 ಎಕರೆ 14 ಗುಂಟೆ ಮಾರಾಟ ಮಾಡಿದ್ದಾರೆ. ಸದರಿ ಮಾರಾಟ ಮಾಡಿರುವ ಜಮೀನಿನ ಚೆಕ್ಕು ಬಂದಿ ಹೇಳುತ್ತೇನೆ. ಪೂರ್ವಕ್ಕೆ 2 ನೇ ಪ್ರತಿವಾದಿಯ ಜಮೀನು, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಈಶ್ವರಪ್ಪನ ಜಮೀನು, ದಕ್ಷಿಣಕ್ಕೆ ಹಾಲಮ್ಮನ ಜಮೀನು ಇದೆ. 3 ನೇ ಐಟಂಆಸ್ತಿಯ ಉಳಿದ 3 ಎಕರೆ ಜಮೀನು ಸುನಂದಮ್ಮ ಅಂದರೆ ಪ್ರತಿವಾದಿ 1(ಇ) ಇವರ ಹೆಸರಿನಲ್ಲಿ ಇದೆ. ಸುನಂದಮ್ಮನಿಗೆ 1 ನೇ ಪ್ರತಿವಾದಿ ಲಕ್ಷ್ಮಿಪತಿಯಪ್ಪನಿಂದ ಬಂದಿರುತ್ತದೆ. ಸದರಿ ಲಕ್ಷ್ಮಿಪತಿಯಪ್ಪನಿಗೆ ಮೋಸದಿಂದ ಜಮೀನು ಬಂದಿರುತ್ತದೆ. ಸದರಿ ಜಮೀನು ಲಕ್ಷ್ಮಿಪತಿಯಪ್ಪನಿಗೆ ಖಾತೆಯಾಗುವ ಮುಂಚೆ ಅವರ ತಂದೆ ಉಗ್ರಪ್ಪನ ಹೆಸರಿಗೆ ಖಾತೆ ಇತ್ತು. 3 ನೇ ಐಟ ಆಸ್ತಿಯ 3 ಎಕರೆ ಜಮೀನು 1 ನೇ ಪ್ರತಿವಾದಿಯ ತಂದೆ ಉಗ್ರಪ್ಪನೆ ಹೆಸರಿಗೆ ಖಾತೆ ಇದ್ದುದ್ದರ ಬಗ್ಗೆ ದಾಖಲೆ ಹಾಜರು ಮಾಡಿದ್ದೇನೆ

ಸದರಿ ಮೂರು ಎಕರೆ ಜಮೀನು ಲಕ್ಷ್ಮಿಪತಿಯಪ್ಪ ನಿಪಿ-11 ರ ಪ್ರಕಾರ ವೆಂಕಟಾಚಲ ಶೆಟ್ಟಿಯವರಿಂದ ರೂ.20 ಸಾವಿರಕ್ಕೆ ದಿಃ05.10.1998 ರಂದು ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ಆ ಮೂರು ಎಕರೆ ಜಮೀನು ಲಕ್ಷ್ಮಿಪತಿಯಪ್ಪ ಸ್ವಂತ ಆದಾಯದಿಂದ ಖರೀದಿಸಿದ್ದರಿಂದ ಆತನ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ದಾವೆಯ 4 ನೇ ಐಟಂ ಆಸ್ತಿಯು ನನ್ನ ತಂದೆ ಹೆಸರಿಗೆ ಖಾತೆ ಇದೆ. ಸಾಕ್ಷಿ ಮುಂದುವರೆದು ಈಗ ರಂಗಪ್ಪನ ಹೆಸರಿಗೆ ಇದೆ ಎಂದು ಹೇಳುತ್ತಾರೆ. ಸದರಿ 7 ಎಕರೆ 10 ಗುಂಟೆ ಜಮೀನಿನ ಚೆಕ್ಕು ಬಂದಿ ಹೇಳಲು

ಆಗುವುದಿಲ್ಲ.

ನಾನು ಸುಮಾರು 40 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದೇನೆ. ನಾನು ಬೆಂಗಳೂರಿನಲ್ಲಿ ಯಾವುದೇ ಕೆಲಸ ಮಾಡಿಲ್ಲ. ಈ ಮೊದಲು ಲಕ್ಷಿಪತಿಯಪ್ಪನ ಮಕ್ಕಳು ಆತನ ವಿರುದ್ಧ ಪಾಲು ಕೋರಿ ಆತನ ಮಕ್ಕಳು ಹಿರಿಯೂರಿನ ಎ ಸಿ ಜೆ ನ್ಯಾಯಾಲಯದಲ್ಲಿ ಓಎಸ್ 33/2012 ಸಲ್ಲಿಸಿದ್ದರು ಎಂದರೆ ನಿಜ. ಸದರಿ ದಾಗೆ ನಡೆದ ಬಗ್ಗೆ ನನಗೆ ಗೊತ್ತಿದೆ. ಸದರಿ ದಾವೆಯ ಆಸ್ತಿಗಳು ಲಕ್ಷ್ಮಿಪತಿಯಪ್ಪನ ಹೆಸರಿನಲ್ಲಿ ಖಾತೆ ಇದ್ದವು ಎಂದರೆ ನಿಜ. ಸದರಿ ದಾವೆಯಲ್ಲಿ ಈ ದಾವೆಯ ಆಸ್ತಿಗಳು ಇದ್ದವು ಎಂದರೆ ಸಾಕ್ಷಿ ಆ ರೀತಿ ಯಾವುದೇ ದಾವೆ ಸಲ್ಲಿಸಿಲ್ಲ ಎಂದು ಹೇಳುತ್ತಾರೆ. ಸದರಿ ದಾವೆಯು ಲಕ್ಷ್ಮಿಪತಿಯಪ್ಪನ ಮಕ್ಕಳ ಪರವಾಗಿ ಡಿಕ್ರಿ ಆಯಿತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ದಾವೆ ಇನ್ನೂ ಚಾಲ್ತಿಯಲ್ಲಿದೆ ಎಂದು ಹೇಳುತ್ತಾರೆ. ಆ ದಾವೆಯಲ್ಲಿ ನಾನು ಭಾಗಬೇಕೆಂದು ಅರ್ಜಿ ಸಲ್ಲಿಸಿಲು ಪ್ರಯತ್ನ ಪಟ್ಟೆ ಸದರಿ ದಾವೆಯಲ್ಲಿ ನನ್ನ ಹೆಸರು ದಾಖಲಾಗಿಲ್ಲ ಎಂದರೆ ಸರಿ. ದಾವೆಯ 1 ನೇ ಐಟಂ ಆಸ್ತಿ ಮೇಲೆ ನನ್ನ ತಂದೆ ಕಾಲದಲ್ಲಿ ಪಿ ಎಲ್ ಡಿ ಬ್ಯಾಂಕ್ ನಲ್ಲಿ ಸಾಲ ಇತ್ತು ಎಂದರೆ ನಿಜ. ಆದರೆ ಆ ಸಾಲವನ್ನು ಲಕ್ಷ್ಮಿಪತಿಯಪ್ಪ ತೀರುವಳಿ ಮಾಡಿದ್ದೇನ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಸಾಲ ತಾನು ತೀರುವಳಿ ಮಾಡಿದ್ದೇನೆ ಎಂದು ಹೇಳುತ್ತಾರೆ. ಆ ಸಾಲ ನಾನು ತೀರುವಳಿ ಮಾಡಿದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯದಲ್ಲಿ ಹಾಜರು ಮಾಡಿದ್ದೇನೆ. ಆ ಸಾಲವನ್ನು ನಾನು ತೀರುವಳಿ ಮಾಡಿಲ್ಲ ಹಾಗಾಗಿ ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ ಹಾಗಾಗಿ ಅದನ್ನುಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಸಾಲವನ್ನು ಲಕ್ಷ್ಮಿಪತಿಯಪ್ಪ ತೀರುವಳಿ ಮಾಡಿದ್ದಾನೆ ಎಂದರೆ ಸರಿಯಲ್ಲ.

ನಾನು 1990 ರಲ್ಲಿ ಬೆಂಗಳೂರಿಗೆ ಹೋದೆ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ಸಾಕ್ಷಿಗೆ ದಿಃ15.01.1978 ರ ಒಂದು ಜೆರಾಕ್ಸ್ ದಾಖಲೆ ತೋರಿಸಿ ಅದರಲ್ಲಿ ಬಿಕಲಂ

ದಾರ ಯಾರು ಎಂದು ಕೇಳಿದಾಗ ಸಾಕ್ಷಿ ತಾನು ಬರೆದುಕೊಟ್ಟಿಲ್ಲ ಮತ್ತು ಸಹಿ ಮಾಡಿಕೊಟ್ಟಿಲ್ಲ ಎಂದು ಹೇಳುತ್ತಾರೆ. ಸದರಿ ದಾಖಲೆ ಪ್ರಕಾರ ನಾನು 1978 ರಲ್ಲಿ ಲಕ್ಷ್ಮಿಪತಿಯಪ್ಪನ ಹೆಸರಿಗೆ ಒಂದು ಹಕ್ಕು ಬಿಟ್ಟ ಪತ್ರ ಬರೆದು ಬ್ಯಾಂಕಿನ ಎಲ್ಲಾ ಸಾಲ ನೀವೇ ತಿರಿಸಿಕೊಳ್ಳಿ ಎಂದು ಹೇಳಿ ಬೆಂಗಳೂರಿಗೆ ಹೋದೆ ಎಂದರೆ ಸರಿಯಲ್ಲ. ಸದರಿ ದಾಖಲೆ ಆಗುವ ಹೊತ್ತಿಗೆ ನನ್ನ ಮತ್ತು ಲಕ್ಷ್ಮಿಪತಿಯಪ್ಪನ ಮದ್ಯೆ ಆಸ್ತಿಗಳು ವಿಭಾಗ ಆಗಿದ್ದವು ಎಂದರೆ ಸರಿಯಲ್ಲ. ಸದರಿ ಹಕ್ಕು ಬಿಟ್ಟ ಪತ್ರ ನನ್ನ ಅಕ್ಷರದಲ್ಲಿಯೇ ಇದ್ದು ಸ್ವತಃ ನಾನೇ ಬರೆದುಕೊಟ್ಟು ಸಹಿ ಮಾಡಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲಕ್ಷ್ಮಿಪತಿಯಪ್ಪನ ಹೆಸರಿಗೆ ಆಸ್ತಿಗಳ ಖಾತೆ ಆದಾಗ ಜೆ ಜಿ ಹಳ್ಳಿ ನಾಡಕಛೇರಿಗೆ ಯಾವುದೇ ತಕರಾರು ಸಲ್ಲಿಸಿಲ್ಲ. ನನ್ನ ಪ್ರಕಾರ ಜೆ ಜಿ ಹಳ್ಳಿಯ ನಾಡಕಛೇರಿಯಲ್ಲಿ ದಾವಾ ಸ್ವತ್ತುಗಳ ಯಾವುದೇ ಪ್ರಕರಣ ನಡೆದಿಲ್ಲ. ಸಾಕ್ಷಿ ಮುಂದುವರೆದು ಚಿತ್ರದುರ್ಗದ ಎ ಸಿ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾಗಿ ಜೆ ಜಿ ಹಳ್ಳಿಯ ನಾಡ ಕಛೇರಿಗೆ ಕಡತ ಹಿಂತಿರುಗಿಸಿದ್ದಾರೆ. ಆದರೆ ನಾಡ ಕಛೇರಿಯಿಂದ ನನಗೆ ಯಾವುದೇನೋಟೀಸ್ ಬಂದಿಲ್ಲ.ನನಗೆ ನೋಟೀಸ್ ಬಂದರೂ ಸಹ ನಾನು ನಾಡಕಛೇರಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಮೇಲೆ ನನಗೆ ಇದ್ದ ಹಕ್ಕನ್ನು ದಿಃ15.01.1978 ರಂದು 1 ನೇ ಪ್ರತಿವಾದಿ ಲಕ್ಷ್ಮಿಪತಿಯಪ್ಪನ ಹೆಸರಿಗೆ ಹಕ್ಕು ಬಿಟ್ಟುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ  ಎಂ ಎಫ್ ಸಿ ಹಿರಿಯೂರು.